ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಪ್ರೌ.ಶಾ:ರಾ.ಮ.ಚಿ.ಸ್ಪರ್ಧೆ:2015-16 ದಿನಾಂಕ:18ನೇ ಸೆಪ್ಟೆಂಬರ್ 2015

## : ಸು ತ್ತೋ ಲೆ :

**ವಿಷಯ**: 2015-16ನೇ ಸಾಲಿನಲ್ಲಿ ಸರ್ಕಾರಿ/ಅನುದಾನಿತ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆ ಏರ್ಪಡಿಸುವ ಬಗ್ಗೆ [ಚಿತ್ರಕಲಾ ವಿಭಾಗದಿಂದ]

**ಉಲ್ಲೇಖ**: ಸರ್ಕಾರಿ ಆದೇಶ ಸಂಖ್ಯೆ:ಇಡಿ:185:ಎಸ್ಇಎಸ್:96, ದಿನಾಂಕ:29.11.1996.

>>>>>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶದನ್ವಯ ರಾಜ್ಯದ ಸರ್ಕಾರಿ / ಅನುದಾನಿತ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

**ಸ್ಪರ್ಧೆಯ ವಿವರ:**

- ಪ್ರೌಢಶಾಲೆಯ 8, 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮಾತ್ರ ದಿನಾಂಕ:05.11.2015 ರಿಂದ ದಿನಾಂಕ:20.11.2015ರ ಒಳಗೆ [ಸೂಕ್ತವಾದ ಒಂದು ದಿನ ಆಯ್ಕೆಮಾಡಿಕೊಳ್ಳುವುದು] ಶಾಲೆಯಲ್ಲಿ ಸ್ಪರ್ಧೆ ನಡೆಸುವುದು
- ಪ್ರೌಢಶಾಲಾ ಹಂತದಲ್ಲಿ ಸ್ಪರ್ಧೆ ನಡೆಸಿ ಪ್ರಥಮ ಹಾಗೂ ದ್ವಿತೀಯ ಇಬ್ಬರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಜಿಲ್ಲಾ ಮಟ್ಟದ ಆಯ್ಕೆಗೆ ವಿದ್ಯಾರ್ಥಿಗಳ ಪೂರ್ಣ ವಿಳಾಸದೊಂದಿಗೆ ಕೃತಿಗಳನ್ನು ವಿಭಾಗ ಮಟ್ಟದ ನೋಡಲ್ ಅಧಿಕಾರಿಗಳಿಗೆ ತಲುಪಿಸುವುದು. ಕೃತಿಯ ಹಿಂಬಾಗದಲ್ಲಿ ವಿದ್ಯಾರ್ಥಿಯ ಪೂರ್ಣ ಹೆಸರು ತರಗತಿ, ಶಾಲೆಯ ಪೂರ್ಣ ವಿಳಾಸ, ತಾಲ್ಲೂಕು, ಜಿಲ್ಲೆ ಹಾಗೂ ಮುಖ್ಯ ಶಿಕ್ಷಕರ ಮೊಹರಿನೊಂದಿಗೆ ಸಹಿ ಹಾಗೂ ದೂರವಾಣಿ / ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು.
- ವಿಭಾಗ ಮಟ್ಟದಲ್ಲಿ ಶಾಲೆಯಿಂದ ಬಂದಿರುವ ವಿದ್ಯಾರ್ಥಿಗಳ ಕೃತಿಗಳನ್ನು ಜಿಲ್ಲಾವಾರು ವಿಂಗಡಿಸಿ ಪ್ರತಿ ಜಿಲ್ಲೆಗೆ ಉತ್ತಮ 06 [ಆರು] ಕೃತಿಗಳನ್ನು ಆಯ್ಕೆಗೆ ಪರಿಗಣಿಸುವುದು.
- ಜಿಲ್ಲಾ ಮಟ್ಟದಲ್ಲಿ ಆಯ್ಕೆಗೊಂಡ ವಿದ್ಯಾರ್ಥಿಗಳು ರಾಜ್ಯ ಮಟ್ಟದ ಸ್ಪರ್ಧೆಗೆ ಅರ್ಹರಾಗಿರುತ್ತಾರೆ.
- ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಗೊಂಡಿರುವ ಕೃತಿಗಳ ವಿದ್ಯಾರ್ಥಿಗಳಿಗೆ ಸ್ಪರ್ಧಾ ದಿನಾಂಕವನ್ನು ಹಾಗೂ ಸ್ಪರ್ಧಾ ವಿಷಯವನ್ನು ಮುಂಚಿತವಾಗಿ ತಿಳಿಸಲಾಗುವುದು.

**ಶಾಲಾ ಹಂತದ ಸ್ಪರ್ಧೆಯ ನಿಯಮ:**

- ವಿಷಯ: ಶಿಕ್ಷಣ ನನ್ನ ಹಕ್ಕು, ಸ್ವಚ್ಛ ಕರ್ನಾಟಕ, ಪ್ರೌಢ ಶಿಕ್ಷಣ ಕ್ಷೇತ್ರಕ್ಕೆ ಸರ್ಕಾರದ ಯೋಜನೆಗಳು [ಯಾವುದಾದರು ಒಂದು]
- ಸಮಯ: 2ಗಂಟೆ 30 ನಿಮಿಷಗಳು.
- ಕಾಗದದ ಅಳತೆ : 11 X 16 [ಇಂಚು] **¼** ಅಳತೆ ಕಾಗದವನ್ನು ಶಾಲಾ ದಾಸ್ತಾನಿನಿಂದ ವಿತರಿಸುವುದು.
- ಮಾಧ್ಯಮ:ಜಲವರ್ಣ/ಕ್ರೆಯಾನ್ಸ್.
- ತೀರ್ಪುಗಾರರು: ಮುಖ್ಯ ಶಿಕ್ಷಕರು, ಚಿತ್ರಕಲಾ ಶಿಕ್ಷಕರು, ಹಿರಿಯ ಶಿಕ್ಷಕರು,
- ಆಯ್ಕೆಗೊಂಡ ಪ್ರಥಮ ಹಾಗೂ ದ್ವಿತೀಯ ಕೃತಿಗಳನ್ನು ಮುಖ್ಯ ಶಿಕ್ಷಕರು ದೃಢೀಕರಿಸಿ ದಿ:25-11-15 ರ ಒಳಗಾಗಿ ವಿಭಾಗ ಮಟ್ಟದ ನೋಡಲ್ ಅಧಿಕಾರಿಗಳಿಗೆ ಕಳುಹಿಸುವುದು [ಕೃತಿ ಹಾಳಾಗದಂತೆ ಎಚ್ಚರ ವಹಿಸುವುದು]
- ಶಾಲಾ ಹಂತದಲ್ಲಿ ಆಯ್ಕೆಯಾದ ಕೃತಿಗಳಿಗೆ ಪ್ರಥಮ 100/- [ನೂರು ರೂಪಾಯಿ], ದ್ವಿತೀಯ-75/- [ಎಪ್ಪತ್ತೈದು ರೂಪಾಯಿಗಳು], ತೃತೀಯ-50/- [ಐವತ್ತು ರೂಪಾಯಿಗಳು] ನಗದು ಬಹುಮಾನ ನೀಡುವುದು. ಈ ಹಣವನ್ನು [ಶಾಲೆಯಲ್ಲಿ ಪ್ರತಿ ವಿದ್ಯಾರ್ಥಿಯಿಂದ ರೂ 10/-ರಂತೆ ಸಂಗ್ರಹಿಸಿದ ಚಿತ್ರಕಲಾ ಶುಲ್ಕದಲ್ಲಿ ಶೇಕಡ10% ರಂತೆ ಉಪಯೋಗಿಸಲು ತಿಳಿಸಿದೆ.] ಲಭ್ಯವಿಲ್ಲದಿದ್ದಲ್ಲಿ ಶಾಲಾ ಸಂಚಿತ ನಿಧಿಯಿಂದ ನೀಡುವುದು.
- ಶಾಲಾ ಹಂತದಲ್ಲಿ ಆಯ್ಕೆಯಾದ ಪ್ರಥಮ ಮತ್ತು ದ್ವಿತೀಯ ಎರಡು ಕೃತಿಗಳನ್ನು ಹಾಗೂ ಭಾಗವಹಿಸಿದ ವಿದ್ಯಾರ್ಥಿಗಳ ಹೆಸರಿನ ಪಟ್ಟಿಯನ್ನು ಈ ಕೆಳಗಿನ ವಿಳಾಸಕ್ಕೆ ಸಲ್ಲಿಸುವುದು.

  <u>**ಬೆಂಗಳೂರು ಹಾಗೂ ಮೈಸೂರು ವಿಭಾಗದವರು:**</u> ನೋಡಲ್ ಅಧಿಕಾರಿಗಳು ಸಹಾಯಕ ನಿರ್ದೇಶಕರು, ಚಿತ್ರಕಲೆ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-1 ಇವರಿಗೆ ಕಳುಹಿಸುವುದು.

**ಕಲಬುರಗಿ ವಿಭಾಗದವರು:** ನೋಡಲ್ ಅಧಿಕಾರಿಗಳು ಹಿರಿಯ ಚಿತ್ರಕಲಾ ವಿಷಯ ಪರಿವೀಕ್ಷಕರು ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಇವರಿಗೆ ಕಳುಹಿಸುವುದು.

**ಬೆಳಗಾವಿ ವಿಭಾಗದವರು:** ನೋಡಲ್ ಅಧಿಕಾರಿಗಳು ಕಲಾವಿದರು. ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಕಳುಹಿಸುವುದು.

- **ನಗದು ಬಹುಮಾನದ ವಿವರ:** ಪ್ರತಿ ಜಿಲ್ಲೆಗೆ ಉತ್ತಮ 6[ಆರು] ಕಲಾ ಕೃತಿಗಳನ್ನು ಆಯ್ಕೆಮಾಡಲಾಗುವುದು ಆಯ್ಕೆಯಾದ ಪ್ರತಿ ವಿದ್ಯಾರ್ಥಿಗಳಿಗೆ ತಲಾ ರೂ 1000/- [ಒಂದು ಸಾವಿರ ರೂಪಾಯಿ] ರಂತೆ ನಗದು ಬಹುಮಾನ ನೀಡಲಾಗುವುದು.

**ರಾಜ್ಯ ಮಟ್ಟದ ಸ್ಪರ್ಧೆಗಳ ವಿವರ:**

- ಬೆಂಗಳೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾದ ಕೃತಿಗಳ, ವಿದ್ಯಾರ್ಥಿಗಳು ಹಾಗೂ ಅವರ ಜೊತೆ ಬರುವ ಒಬ್ಬರಿಗೆ ಪೋಷಕರ/ತಂದೆ/ತಾಯಿ/ಶಿಕ್ಷಕರು ಇವರಿಗೆ ಬಂದು ಹೋಗುವ ಸಾಮಾನ್ಯ ಬಸ್ ಪ್ರಯಾಣ ದರವನ್ನು ನೀಡಲಾಗುವುದು.
- ರಾಜ್ಯ ಮಟ್ಟದ ಸ್ಪರ್ಧೆಗೆ ಬರುವಾಗ ಪಾಸ್ ಪೋರ್ಟ್ ಅಳತೆಯ ಒಂದು ಫೋಟೋ ಮತ್ತು ಶಾಲಾ ದೃಢೀಕರಣ ಪತ್ರ ತರುವುದು.
- ಸ್ಪರ್ಧೆಗೆ ಬೇಕಾದ ಬಣ್ಣ, ಬ್ರೆಶ್ ಇತ್ಯಾದಿಗಳನ್ನು ವಿದ್ಯಾರ್ಥಿಗಳೇ ತರುವುದು. ಡ್ರಾಯಿಂಗ್ ಪೇಪರ್ ಮಾತ್ರ ನೀಡಲಾಗುವುದು.
- ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ/ಕೆಳಕಂಡಂತೆ ಬಹುಮಾನ ನೀಡಲಾಗುವುದು ಹಾಗೂ ಭಾಗವಹಿಸಿದವರಿಗೆ ಪ್ರಮಾಣ ಪತ್ರ ನೀಡುವುದು.

| | |
|---|---|
| ಪ್ರಥಮ ಬಹುಮಾನ | ರೂ 15,000/- |
| ದ್ವಿತೀಯ ಬಹುಮಾನ | ರೂ 12,000/- |
| ತೃತೀಯ ಬಹುಮಾನ | ರೂ 10,000/- |
| ಸಮಾಧಾನಕರ ಬಹುಮಾನ | ರೂ 3,000/-[10 ವಿದ್ಯಾರ್ಥಿಗಳಿಗೆ] |

- **ಹಣಕಾಸಿನ ವ್ಯವಸ್ಥೆ:** ಅನುಬಂಧ-1ರಲ್ಲಿ ಹಂಚಿಕೆ ಮಾಡಿರುವಂತೆ ಆಯಾ ವಿಭಾಗದ ಆಯುಕ್ತರು/ಅಪರ ಆಯುಕ್ತರ ಖಾತೆಯಲ್ಲಿರುವ ಚಿತ್ರಕಲಾ ನೊಂದಣಿ ಶುಲ್ಕದಲ್ಲಿ ಕಾರ್ಯಕ್ರಮದ ಖರ್ಚು ವೆಚ್ಚಕ್ಕೆ ಬೇಕಾಗುವ ಮೊತ್ತವನ್ನು ಅನುಮತಿ ಪಡೆದು ಹಣ ಡ್ರಾ ಮಾಡಿ ಕಾರ್ಯಕ್ರಮ ನಡೆಸುವುದು.
- **ಸೂಚನೆ** ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿರುವ ಸರ್ಕಾರಿ/ಅನುದಾನಿತ ಪ್ರೌಢಶಾಲೆಗಳಿಗೆ ಮಾಹಿತಿ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಕ್ರಮ ವಹಿಸುವುದು. ಉಲ್ಲೇಖದ ಆದೇಶದಂತೆ ಚಿತ್ರಕಲಾ ಶುಲ್ಕ ಸಂಗ್ರಹಿಸಿದ ಶಾಲೆಯವರು 20% [ರೂ. 2/-] ಹಣವನ್ನು ಚಿತ್ರಕಲಾ ಸ್ಪರ್ಧೆಯ ನೋಂದಣಿ ಶುಲ್ಕವಾಗಿ ಬ್ಯಾಂಕ್ ಹುಂಡಿ ಮೂಲಕ ಆಯುಕ್ತರು/ಅಪರ ಆಯುಕ್ತರ ಕಛೇರಿಗೆ ಸಲ್ಲಿಸಲು ತಿಳಿಸುವಂತೆ ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಶ್ರೀ **ಮಹಾಂತೇಶ್ ಅ.ಕಂಠಿ,** ಸಹಾಯಕ ನಿರ್ದೇಶಕರು. ಚಿತ್ರಕಲೆ, ಆಯುಕ್ತರ ಕಛೇರಿ, ಬೆಂಗಳೂರು ಇವರನ್ನು ಸಂಪರ್ಕಿಸುವುದು [ಮೊಬೈಲ್ ಸಂಖ್ಯೆ:9902249906] ಹಾಗೂ ಇಲಾಖಾ ವೆಬ್‌ಸೈಟ್ **www.Schooleducation.kar.nic.in.** ಗಮನಿಸುವುದು.

22/9/15

**[ಕೆ.ಎಸ್.ಸತ್ಯಮೂರ್ತಿ]**
**ಆಯುಕ್ತರು.**

*ಪ್ರತಿಯನ್ನು:*

*01.* ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
*02.* ಅಪರ ಆಯುಕ್ತರು ಧಾರವಾಡ ಮತ್ತು ಕಲಬುರಗಿ,
*03.* ನಿರ್ದೇಶಕರು, ಪ್ರೌಢಶಿಕ್ಷಣ ಧಾರವಾಡ, ಕಲಬುರಗಿ ಮತ್ತು ಬೆಂಗಳೂರು.
*04.* ಸಹನಿರ್ದೇಶಕರು, ಬೆಳಗಾವಿ, ಕಲಬುರಗಿ, ಮೈಸೂರು ಮತ್ತು ಬೆಂಗಳೂರು.
*05.* ರಾಜ್ಯದ ಎಲ್ಲಾ ಉಪನಿರ್ದೇಶಕರು[ಆಡಳಿತ]
*06.* ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು.
*07.* ವಿಭಾಗೀಯ ಚಿತ್ರಕಲಾ ವಿಷಯ ಪರಿವೀಕ್ಷಕರು, ಬೆಳಗಾವಿ, ಕಲಬುರಗಿ, ಮೈಸೂರು ಮತ್ತು ಬೆಂಗಳೂರು.
*08.* ಕಛೇರಿ ಪ್ರತಿ.

\\10.96.135.2\e\D... 2015.doc